

ಲೇಹ್ ಅರಮನೆ



ಲೇಹ್ ನಗರ ಬೀದಿ

ಹಿಮದ ಹೊಳಪಿಗೆ ಕಪ್ಪು ಚಶ್ಮ ಹಾಕಿಕೊಂಡು, ತಲೆವಸ್ತ್ರ ಕಟ್ಟಿಕೊಂಡು, ದೂಳಾದ ಬಟ್ಟೆ, ಹಳೆಯ ಜರ್ಕಿನ್, ಕಿವಿಗೆ ಉಣ್ಣೆ ಟೋಪಿ ತೊಟ್ಟು ಅವರು ಅಂತರಿಕ್ಷಯಾನಿಗಳಂತೆ ತೋರುತ್ತಿದ್ದರು. ವಿಪರೀತ ಚಳಿಯೊಳಗೆ ದುಡಿಯುವ ಇವರಲ್ಲಿ ಯಾರಿಗೆ ಹವಾಮಾನ ಹೊಂದಾಣಿಕೆ ಶಕ್ತಿ ಹೆಚ್ಚಿರುವುದೋ ಅವರನ್ನು 14 ಸಾವಿರಕ್ಕೂ ಮೇಲಿರುವ ಕಡೆ ಬಿಡುವರು. ಇವರ ಶ್ರಮಿಕ ಸಾಹಸವು ದೈಹಿಕ ದೃಢತೆಯಿಂದ ಬಂದುದಲ್ಲ. ಬಾಳಿನ ಅನಿವಾರ್ಯತೆಯಿಂದ ಬಂದುದು ಅನಿಸಿತು.

ಬಾನು ಅಡ್ಮಿಟ್ ಆದ ಕೆಲವೇ ಹೊತ್ತಲ್ಲಿ ಒಬ್ಬ ಜಾರ್ಖಂಡಿನ ಕೂಲಿಯಾಳು ಹೊಟ್ಟೆ ನೋವೆಂದು ನುಲಿಯುತ್ತ ಬಂದ. ಹಾಸಿಗೆಯಲ್ಲಿ ಹೊರಳಾಡುತ್ತ 'ಉಲ್ಟಿ ಉಲ್ಟಿ' ಎಂದು ಕಿರುಚುತ್ತಿದ್ದನು. ದಾದಿಗಳು ವಾಂತಿಚೀಲ ಕೊಟ್ಟರು. ವ್ಯಾವ್ಯಾಖ್ ಸದ್ದು ಮಾಡುತ್ತ ಕಕ್ಕಿದನು. ಪಿತ್ತದ ನೀರು ಪ್ಲಾಸ್ಟಿಕ್ ಚೀಲದಲ್ಲಿ ಇಳಿಯಿತು. ಇಂಜೆಕ್ಷನ್ ಡ್ರಿಪ್ಸ್ ಮತ್ತು ಆಕ್ಸಿಜನ್ ಹಾಕಿದ ಬಳಿಕ ಶಾಂತನಾದನು. ಮೈಕೈ ನೋಡಿದೆ. ವಲಸೆ ಕೂಲಿಕಾರರ ಕಟುಸತ್ಯಗಳನ್ನು ಹೇಳುತ್ತಿತ್ತು. ಸೈನಿಕರಿಗಿರುವ ರಕ್ಷಣೆ ಮರ್ಯಾದೆ ಹೊರಗುತ್ತಿಗೆಯ ಕೆಲಸಗಾರರಿಗೆ ಇದ್ದಂತೆ ತೋರಲಿಲ್ಲ.

ಸೋಜಿಗ ಹುಟ್ಟಿಸಿದ್ದು ಲೇಹ್ ಆಸ್ಪತ್ರೆ. ಇಂಡಿಯಾದಲ್ಲಿ ಸರ್ಕಾರಿ ದವಾಖಾನೆ ಎಂದರೆ ಹೇಳು–ಕೇಳುವವರಿಲ್ಲದ ಸಂತೆ. ಲಡಾಕಿನ ಆಸ್ಪತ್ರೆ ಇದಕ್ಕೆ ವಿನಾಯಿತಿ. ಅದೊಂದು ಸುಸಜ್ಜಿತ ಆಸ್ಪತ್ರೆ. ಎಲ್ಲವೂ ಉಚಿತ. ಅಲ್ಲಿದ್ದ ಕಾಶ್ಮೀರಿ ಮತ್ತು ಟಿಬೆಟಿಯನ್ ಮೂಲದ ವೈದ್ಯರು, ದಾದಿಯರ ಸೇವಾಮನೋಭಾವ ಅನುಕರಣೀಯವಾಗಿತ್ತು. ಬಾನುಗೂ ಜಾರ್ಖಂಡಿನ ಕಾರ್ಮಿಕನಿಗೂ ಸಿಕ್ಕ ಉಪಚಾರ ಕಂಡರೆ, ನಾನೂ ಮಲಗಿ ಆರೈಕೆ ಪಡೆಯೋಣವೇ ಎಂದು ಅಸೂಯೆ ಹುಟ್ಟಿತು. ಅಲ್ಲಿನ ವೈದ್ಯರು ನರ್ಸುಗಳಲ್ಲಿ ಬುದ್ಧನ ಕರುಣೆ ಮತ್ತು ಮೈತ್ರಿಯೇ ಮೈತಳೆದಂತಿತ್ತು. ಜಾರ್ಖಂಡಿನ ಕೂಲಿಕಾರ, ಎಷ್ಟು ದಿನವಾಗಿತ್ತೋ ಸ್ನಾನ ಮಾಡಿ, ಬಟ್ಟೆ ಬದಲಿಸಿ. ವೈದ್ಯರು ಅವನ ಕೊಳಕು ಅಂಗಿಯನ್ನು ಹಿಡಿದು ಸಾವಧಾನವಾಗಿ ಮೇಲಕ್ಕೆ ಸರಿಸಿ ಹೊಟ್ಟೆಯ ಮೇಲೆ ಕೈಯಿಟ್ಟು ನಿಧಾನವಾಗಿ ಅಮುಕುತ್ತ 'ಕಹ್ಞಾ ಹೈ ದರ್ದ್' ಎಂದು ಕೇಳುವುದನ್ನು ಕಂಡು ಮನಸ್ಸು ತುಂಬಿತು.

ಬಾನುಗೆ ಇಡೀ ದಿನವಿದ್ದರೂ ಆಮ್ಲಜನಕದ ಪ್ರಮಾಣ ಸ್ಥಿರಗೊಳ್ಳಲಿಲ್ಲ. 75–85ರ ನಡುವೆ ಓಲಾಡುತ್ತಿತ್ತು. ಇನ್ನೊಂದು ರಾತ್ರಿ ಅಬ್ಸರ್‌ವೇಶನ್‌ನಲ್ಲಿ ಇಡಬೇಕೆಂದು ಪ್ರವಾಸಿಗರ ವಾರ್ಡಿಗೆ ಶಿಫ್ಟ್ ಮಾಡಲಾಯಿತು. ಅಲ್ಲಿ ದೇಶವಿದೇಶದ ಪ್ರವಾಸಿಗರು ಅತ್ತೆಮನೆಯ ಅಳಿಯಂದಿರಂತೆ, ಹಸಿರು ಬೆಡ್‌ಶೀಟ್ ಹೊದೆಸಿದ ಮಂಚಗಳಲ್ಲಿ ಮುಖಕ್ಕೆ ಆಮ್ಲಜನಕದ ಮುಖವಾಡ ಧರಿಸಿ ಮಲಗಿ ಷೋಡಷೋಪಚಾರ ಪಡೆಯುತ್ತಿದ್ದರು. ಅವರಲ್ಲಿ ಕೇರಳದಿಂದ ಹನಿಮೂನಿಗೆ ಬಂದ ನವದಂಪತಿಯ ಜೋಡಿಯೂ ಇತ್ತು. ಹುಡುಗಿಯ ಸ್ಥೂಲಕಾಯವೇ ಉಸಿರಾಟವನ್ನು ಕಷ್ಟಗೊಳಿಸಿತ್ತು. ಅವಳ ಮೇಲೆ ಪ್ರೀತಿ ಸುರಿಸುತ್ತಿದ್ದ ಗಂಡನ ಮುಖದ ಮೇಲೆ, ಯಾಕಾದರೂ ಹನಿಮೂನಿಗೆ ಬಂದೆವೊ ಎಂಬ ವಿಷಾದ ಭಾವವಿತ್ತು. ನಾವು ಏನೂ ಆಗದು ಎಂದು ಧೈರ್ಯ ಕೊಟ್ಟೆವು.

ನಮಗೆ ಮೂರು ಹಾದಿಗಳು ತೆರೆದಿದ್ದವು. ಮೊದಲನೆಯದು, ಕೂಡಲೇ ಬೆಂಗಳೂರಿಗೆ ಹಿಂತಿರುಗುವುದು. ಆದರೆ ಟಿಕೀಟು ಸಿಗಲಿಲ್ಲ. ಅತಿತುಟ್ಟಿ ಬೆಲೆಯಲ್ಲಿ ಖರೀದಿಸುವುದಕ್ಕೂ ಮನಸ್ಸು ಬರಲಿಲ್ಲ. ಎರಡನೆಯದು, ಹೋಟೆಲಿನಲ್ಲಿದ್ದು ಲೇಹ್ ತಿರುಗಾಡುತ್ತ, ವಾರ ಕಳೆದು ನಮಗೆ ಕಾದಿರಿಸಿದ ಟಿಕೇಟಿನಲ್ಲೇ ವಾಪಾಸಾಗುವುದು. ಮೂರನೆಯದು, ಆಗಿದ್ದಾಗಲಿ ಎಂದು ಪ್ರವಾಸ ಶುರು ಮಾಡುವುದು. ಆದರೆ ಹನ್ನೆರಡು ಸಾವಿರ ಎತ್ತರದ ಲೇಹ್‌ನಲ್ಲೇ ಈ ಅವಸ್ಥೆ. ಇನ್ನು ಹಾದಿಯಲ್ಲಿ ಹದಿನೆಂಟು ಸಾವಿರದ ಎತ್ತರದ ಎರಡು ಪಾಸುಗಳನ್ನು ದಾಟಬೇಕಿತ್ತು. ಹದಿನಾಲ್ಕು ಸಾವಿರ ಅಡಿ ಎತ್ತರದ ಪ್ಯಾಂಗ್ಯಾಂಗಿನಲ್ಲಿ ಒಂದು ರಾತ್ರಿ ವಸ್ತಿ ಇತ್ತು. ನನ್ನ ತಿರುಗಾಟದ ಹುಚ್ಚಿನಿಂದ ಅನ್ಯಾಯವಾಗಿ ಮಡದಿಯನ್ನು ತಂದು ಸಾಯಿಸುತ್ತಿದ್ದೇನೆಯೇ? ಶವ ಹಾಕಿಕೊಂಡು ವಾಪಾಸು ಹೋಗುವ ದುರವಸ್ಥೆ ಬಂದೀತೇ? ಬಾನುವಿನ ಅಣ್ಣಂದಿರು ನನಗೆ ಕೊಂದೇ ಹಾಕುವರು. ಚಳಿಯಲ್ಲೂ ಮೈಬೆವರಿತು.

ನಾನು ಹಿತ್ತಲಲ್ಲಿ ಮಾವಿನ ಮರ ಹತ್ತುವಾಗ ಬಾನು 'ಬಿದ್ದುಗಿದ್ದು ಸತ್ತೀಯ' ಎಂದು ಎಚ್ಚರಿಸುತ್ತಿದ್ದಳು. ನಾನಾಗ ಹೇಳುತ್ತಿದ್ದೆ: 'ಚಿಂತೆ ಬೇಡ. ನಮ್ಮ ವಂಶದಲ್ಲಿ ಹೆಂಡತಿಯನ್ನು ಮೊದಲು ಕಳಿಸಿದ ಬಳಿಕವೇ ಗಂಡ ಹೋಗುವ ಪದ್ಧತಿಯಿದೆ'. ಆಕೆ 'ಸಾಧ್ಯವೇ ಇಲ್ಲ. ಅಮ್ಮನ ಪರಂಪರೆಯಲ್ಲಿ ಗಂಡನನ್ನೇ ಮೊದಲು ಕಳಿಸಿ ಹಿಂದಿನಿಂದ ನಾವು ಹೋಗುವುದು' ಎಂದು ಉತ್ತರಿಸುತ್ತಿದ್ದಳು. ಈ ಭವಿಷ್ಯವಾಣಿಗಳನ್ನೆಲ್ಲ ನೆನೆದು ತತ್ತರಿಸಿದೆ. ನಾನು ಪರಿತಪಿಸುತ್ತ ಕಿಂಕರ್ತವ್ಯಮೂಢನಾಗಿ ಕೂತಿರುವಾಗ, ಬಾನು ಆಮ್ಲಜನಕ ಹಾಕಿಸಿಕೊಂಡು ಗಡದ್ದಾಗಿ ನಿದ್ದೆ ಹೊಡೆಯುತ್ತಿದ್ದಳು. ಅವಳು 'ನಾನು ಆಸ್ಪತ್ರೆಯಲ್ಲೇ ಇರುತ್ತೇನೆ. ನೀನು ತಿರುಗಾಡಿಕೊಂಡು ಬಾ' ಎಂದಳು. ಅದು ಅವಳು ನನ್ನ ಸತಿವ್ರತಾ ನಿಷ್ಠೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸುವ ಮಾತು. ನಾನು ಸತಿನಿಷ್ಠೆ ಸಾಬೀತುಪಡಿಸುವ ಅವಕಾಶವನ್ನು ಕಳೆದುಕೊಳ್ಳಲಿಲ್ಲ.

'ನೀನಿಲ್ಲದೆ ಪ್ರವಾಸ ಹೋಗಲಾರೆ. ಮುಳುಗಲಿ ತೇಲಲಿ ಒಟ್ಟಿಗೆ' ಎಂದೆ. ಅವಳು 'ಕಿಲಾಡಿ ನೀನು' ಎಂಬಂತೆ ನಸುನಕ್ಕಳು. ಟೂರ್ ಮ್ಯಾನೇಜರ್ ನಮಗೆ ಬೆಂಗಳೂರಿಗೆ ಹೋಗಗೊಡಲಿಲ್ಲ. ಲಡಾಕಿಗೆ ಬಂದ ಕೆಲವರಿಗೆ ಹೀಗಾಗುವುದು ಸಹಜವೆಂದೂ, ದೇಹ ಹೊಂದಾಣಿಕೆಯಾದ ಬಳಿಕ ಅವರೆಲ್ಲ ಪ್ರವಾಸ ಮುಗಿಸಿದ್ದಾರೆಂದೂ, ಇಷ್ಟು ಖರ್ಚು ಮಾಡಿ ಬಂದು ಏನನ್ನೂ ನೋಡದೆ ಹೋಗಬಾರದೆಂದೂ, ಎರಡನೆಯ ದಿನದ

